**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಯವರ ನ್ಯಾಯಾಲಯ, ಪೊನ್ನಂಪೇಟೆ.**

ಕ್ರಿಮಿನಲ್ ಮೊಕದ್ದಮೆ ಸಂಖ್ಯೆ 898/2020 .

ಪ್ರಾ.ಸಾ. : 5
ಚಾ.ಸಾ. : 7

ಹೆಸರು : ಶ್ರೀಮತಿ ತೀರ್ಥ
ಗಂಡನ ಹೆಸರು : ಅಜಯ್ ಎ ಎ
ವಯಸ್ಸು : 36 ವರ್ಷ
ಉದ್ಯೋಗ : ವಲಯ ಅರಣ್ಯಾಧಿಕಾರಿ
ವಿಳಾಸ : ಪೊನ್ನಂಪೇಟೆ

... ......................................................................................................... ...

ದಿನಾಂಕ 21ನೇ ಮಾರ್ಚ್ 2023ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ- ಮಾನ್ಯ ಸ ಸ ಅ ರವರಿಂದ : -

ನಾನು 2019ರ ಅಕ್ಟೋಬರ್ ರಿಂದ 2020ರ ಅಕ್ಟೋಬರ್ ಅವಧಿಯಲ್ಲಿ ಪೊನ್ನಂಪೇಟೆ ವಲಯದಲ್ಲಿ ಕತರ್ವ್ಯ ನಿರ್ವಹಿಸಿರುತ್ತೇನೆ.

ಕಲ್ಲಹಳ್ಳ ವನ್ಯ ಜೀವಿ ವಲಯದಲ್ಲಿ ಹುಲಿ ಮತ್ತು ಜಿಂಕೆ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ದಿನಾಂಕ 27.08.2020ರಂದು ಚಾಸಾ 2, ಚಾಸಾ 5 ಹಾಗೂ ಸಿಬ್ಬಂದಿಗಳಾದ ಚಾಸಾ 1, ಮಹೇಶ್, ಅರಣ್ಯ ವೀಕ್ಷಕ, ಬಸಪ್ಪ ಹಾಗೂ ಶ್ವಾನ ದಳದವರೊಂದಿಗೆ ಆರೋಪಿ 2 ಮತ್ತು 3 ರವರ ಮನೆಗೆ ಶೋಧನೆ ಮಾಡಲು ಹೋಗಿದ್ದೆವು. ಸದರಿ ಆರೋಪಿ 2ರವರ ಮನೆಯಲ್ಲಿ ಸೂಟ್ ಕೇಸ್ ನಲ್ಲಿ 2 ಜೀವಂತ ಕಾಡುತೂಸು ಇರುವುದು ಕಂಡುಬಂದಿದ್ದು ಅವುಗಳನ್ನು ಅಮಾನತ್ತುಪಡಿಸಲಾಯಿತು. ಮಧ್ಯಾಹ್ನ 12ಗಂಟೆಗೆ ಆರೋಪಿ 3 ರವರ ಮನೆಗೆ ಹೋಗಿ ನೋಡಿದಾಗ ಕಬ್ಬಿಣದ ಬೀರುವಿನಲ್ಲಿ ಪ್ಲಾಸ್ಟಿಕ್ ಕವರ್ ನಲ್ಲಿ ಚಿಲ್ಸ್ ಗಳು ಹಾಗೂ ಪ್ಲಾಸ್ಟಿಕ್ ಕವರ್ ನಲ್ಲಿ 2 ಕೆಂಪು ಬಣ್ಣದ ಖಾಲಿ ಕಾಡು ತೂಸು ಇದ್ದವು ಕೊಠಡಿಯಲ್ಲಿ ಬ್ಯಾಗ್ ನಲ್ಲಿ ಮಚ್ಚು ಹಾಗೂ ಚಿಲ್ಸ್ ಗಳು ಇದ್ದವು. ಆರೋಪಿ 3 ರವರ ಪತ್ನಿ ಪರವಾನಿಗೆ ಬಗ್ಗೆ ಕೇಳಲಾಗಿ ಇಲ್ಲ ಎಂದು ತಿಳಿಸಿರುತ್ತಾರೆ. ನಂತರ ಅವರ ಮನೆಯ ಹಿಂಭಾಗದಲ್ಲಿ ತೂಗು ಹಾಕಿದ್ದ ಸ್ವೆಟರ್ ನಲ್ಲಿ ಪ್ರಾಣಿ ಕೂದಲು ಇದ್ದವು, ಅವುಗಳು ಮೇಲ್ನೋಟಕ್ಕೆ ಹುಲಿಯ ಕೂದಲಿನಂತೆ ಕಂಡು ಬಂದವು. ನನ್ನ ಸಮಕ್ಷಮ ಅರಣ್ಯ ಮಹಜರ್ ಮಾಡಿ ಅಮಾನತ್ತುಪಡಿಸಿಕೊಂಡಿರುತ್ತೇವೆ.

ಮನೆಯ ಮುಂಭಾಗ ಹುಲಿಯ ಉಗುರುಗಳನ್ನು ನೆಲದಲ್ಲಿ ಹೂತಿದ್ದರು, ಅವುಗಳನ್ನು ಶ್ವಾನ ದಳ ಗುರುತು ಹಿಡಿದಿರುತ್ತದೆ. ಹುಲಿಯ ದವಡೆ ಭಾಗದ ಹಲ್ಲುಗಳು ಸಹ ಅಲ್ಲಿ ದೊರಕಿರುತ್ತವೆ ಅವುಗಳನ್ನು ವಶಕ್ಕೆ ಪಡೆದಿರುತ್ತೇವೆ. ಈ ಬಗ್ಗೆ ತನಿಖಾಧಿಕಾರಿಗೆ ಹೇಳಿಕೆ ನೀಡಿರುತ್ತೇನೆ. ಸಾಕ್ಷಿಯು ಮುದ್ದೆಮಾಲುಗಳನ್ನು ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದ.

ನಾನು ಕಲ್ಲಹಳ್ಳ ಆರ್ ಎಫ್ ಒ ರವರ ಕಛೇರಿಯಲ್ಲಿ ಹೇಳಿಕೆ ನೀಡಿ ಅಲ್ಲೆ ಸಹಿ ಮಾಡಿದ್ದೇನೆ ಎಂದರೆ ಸರಿ. ನಾನು ದಿನಾಂಕ 28.07.2020 ರಂದು ಆರೋಪಿ 2 ಮತ್ತು 3 ರವರ ಮನೆಗೆ ಹೋಗಿಲ್ಲ ಎಂದರೆ ಸರಿಯಲ್ಲ, ಅವರ ಮನೆಯಲ್ಲಿ ಯಾವುದೇ ಜೀವಂತ ಕಾಡುತೂಸು, ಚಿಲ್ಸ್, ಹುಲಿಯ ಉಗುರು, ಹುಲಿಯ ದವಡೆ ಹಲ್ಲು ಯಾವುದೇ ವಸ್ತುಗಳು ದೊರೆತಿಲ್ಲ ಎಂದರೆ ಸರಿಯಲ್ಲ. ಆರೋಪಿ 2 ಮತ್ತು 3 ರವರ ಮನೆಯಲ್ಲಿ ಯಾವುದೇ ಶೋಧನಾ ಕಾರ್ಯ ಮಾಡಲಿಲ್ಲ ಎಂದರೆ ಸರಿಯಲ್ಲ. ಆರೋಪಿ 3 ರವರ ಪತ್ನಿ ಬಂದೂಕು ಹಾಗೂ ಚಿಲ್ಸ್ ಇಡಲು ಪರವಾನಿಗೆ ಇಲ್ಲ ಎಂದು ತಿಳಿಸಿದರು ಎಂದು ಇದೇ ಮೊದಲ ಬಾರಿಗೆ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ 3 ರವರ ಸ್ವೆಟರ್ ನಲ್ಲಿ ಯಾವುದೇ ಪ್ರಾಣಿ ಕೂದಲು ಇರಲಿಲ್ಲಎಂದರೆ ಸರಿಯಲ್ಲ. ನನ್ನ ಮೇಲಾಧಿಕಾರಿಗಳಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮುದ್ದೆಮಾಲುಗಳು ಚಿಲ್ಸ್ ಗಳಲ್ಲ ಸೀಸಗಳು ಎಂದರೆ ಸರಿಯಲ್ಲ. ಕೊಡಗಿನಲ್ಲಿ ಎಲ್ಲರ ಮನೆಯಲ್ಲಿ ಸೀಸಗಳು ಇರುತ್ತವೆ ಎಂದರೆ ನನಗೆ ಗೊತ್ತಿಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಖ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಗಿರುತ್ತದೆ)

ಓದಿ ಹೇಳಿ ಕೇಳಿಸಿ ಸರಿ ಇದೆ ಎಂದು ಒಪ್ಪಿದೆ.

sd/-
ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ.,ಪೊನ್ನಂಪೇಟೆ.

(ಸಾಕ್ಷಿಯವರ ಸಹಿ)